# ವ್ಯಕ್ತಿತ್ವವನ್ನು ಉಳಿಸಿಕೊಂಡು ಬೆಳೆಯಬೇಕು

**ಕಾವ್ಯಾ**
ಉದಯ 'ನಯನತಾರಾ'ದ ದೀಪಾ

◆ **ನಯನತಾರಾದಲ್ಲಿ ನಿಮ್ಮ ಪಾತ್ರದ ಮಹತ್ವ ಏನು?**

ಮಹತ್ವದ ಪಾತ್ರವನ್ನು ದೀಪಾ ನಿರ್ವಹಿಸುತ್ತಾಳೆ. ನಾಯಕನನ್ನು ಆಕೆ ಎಷ್ಟು ಪ್ರೀತಿಸುತ್ತಾಳೆ ಎಂದರೆ ಹುಚ್ಚು ಹಿಡಿಯುವಷ್ಟು. ಅದು ನಾಯಕನಿಗೆ ಇಷ್ಟ ಆಗುವುದಿಲ್ಲ. ಅವನಿಗೆ ಕಿರಿ ಕಿರಿ ಅನಿಸುತ್ತದೆ. ಒಬ್ಬ ಹುಡುಗಿ ಒಬ್ಬ ಹುಡುಗನನ್ನು ಎಷ್ಟರಮಟ್ಟಿಗೆ ಪ್ರೀತಿಸಬಹುದು ಎನ್ನುವುದನ್ನು ಈ ಪಾತ್ರ ತೋರಿಸುತ್ತದೆ. ಪ್ರೀತಿಸುವಷ್ಟೇ ಆಕೆ ಹಟವಾದಿ ಕೂಡ ಹೌದು. ಯಾರಿಗೂ ಹೆದರುವುದಿಲ್ಲ. ತಂದೆ– ತಾಯಿಗೂ ಕೇರ್ ಮಾಡುವುದಿಲ್ಲ. ಆದರೆ ಮುಗ್ಧ ಸ್ವಭಾವದ ಹದಿಹರೆಯದ ಹುಡುಗಿ. ಈಕೆಗೆ ತುಂಬ ಮೋಸ ಮಾಡುತ್ತಾರೆ. ಕಥೆಯ ನಿರೂಪಣೆಗೆ ಹಲವು ತಿರುವುಗಳನ್ನೂ ನೀಡುತ್ತಾಳೆ.

◆ **ನೀವು ಬಣ್ಣ ಹಚ್ಚಿದ್ದು ಹೇಗೆ? ಅದಕ್ಕಾಗಿ ಮಾಡಿದ್ದ ತಾಲೀಮು...**

ಕಾಲೇಜಿನಲ್ಲಿ ಇರುವಾಗಲೇ ನಾನು ನಟಿ ಆಗಬೇಕು. ತೆರೆಯ ಮೇಲೆ ಕಾಣಿಸಿಕೊಳ್ಳಬೇಕು ಎನ್ನುವ ಕನಸುಗಳನ್ನು ಕಂಡಿದ್ದೆ. ಅದಕ್ಕಾಗಿ ನಟನಾ ಶಾಲೆಗೆ ಹೋಗಲಿಲ್ಲ. ಮನೆಯಲ್ಲಿ ವರ್ಕೌಟ್ ಮಾಡುತ್ತಿದ್ದೆ. ನನಗೆ ಇಷ್ಟ ಆಗುವ ಸಿನಿಮಾ– ಧಾರಾವಾಹಿಗಳ ಪಾತ್ರಗಳನ್ನು ಕನ್ನಡಿ ಮುಂದೆ ನಿಂತು ಅನುಕರಣೆ ಮಾಡುತ್ತಿದ್ದೆ. ಆ ಮೂಲಕವೇ ನಾನು ಅಭಿನಯವನ್ನು ಕಲಿತೆ. ಅವಕಾಶಕ್ಕಾಗಿ ಆಡಿಷನ್ ನೀಡಲು ಆರಂಭಿಸಿದೆ. ಮಾಡಲಿಂಗ್ ಮಾಡಿದೆ. ಚಿಕ್ಕಪುಟ್ಟ ಪಾತ್ರವನ್ನು ನಿರ್ವಹಿಸುವ ಮೂಲಕ ಅಭಿನಯವನ್ನು ನನ್ನದಾಗಿಸಿಕೊಂಡೆ. ಮೊದಲು ಸಿನಿಮಾದಲ್ಲಿ ನಟಿಸಿದೆ. ಎರಡು ಮೂರು ಕಿರುಚಿತ್ರಗಳನ್ನು ಮಾಡಿದೆ. ಮತ್ತೆ ಸಿನಿಮಾದಲ್ಲಿ ಪುಟ್ಟ ಪುಟ್ಟ ಪಾತ್ರಗಳನ್ನೇ ಮಾಡಿದೆ. ಆ ಸಂಪರ್ಕಗಳ ಆಧಾರದ ಮೇಲೆ ಧಾರಾವಾಹಿಗಳಿಗೆ ಅವಕಾಶಗಳು ಸಿಕ್ಕವು. ಉದಯದಲ್ಲಿ ಹೊಸ ಧಾರಾವಾಹಿ ಆರಂಭವಾಗುತ್ತಿದೆ ಎಂದು ಗೊತ್ತಾಯಿತು. ನನ್ನ ಪ್ರಯತ್ನ ಇಲ್ಲಿ ಯಶಸ್ವಿಯಾಯಿತು.

◆ **ನಟನೆಯಲ್ಲಿ ಫೇಮಸ್ ಆದರೆ ನಿಮ್ಮ ಜೀವನ ಶೈಲಿ ಹೇಗೆ ಬದಲಾಗಬಹುದು?**

ನನ್ನ ಪ್ರಯತ್ನವನ್ನು ನಾನು ಮಾಡುತ್ತೇನೆ. ಅದರಿಂದ ನನಗೆ ಕೀರ್ತಿ ಬಂದರೆ ಇವತ್ತು ಹೇಗೆ ಇರುತ್ತೇನೋ ಅವತ್ತೂ ಕೂಡ ಹೀಗೆ ಇರುತ್ತೇನೆ. ನನ್ನ ನಡವಳಿಕೆಯಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ. ಸಿಕ್ಕ ಒಳ್ಳೆಯ ಅವಕಾಶಗಳನ್ನು ಬಳಸಿಕೊಂಡು ಒಳ್ಳೆಯ ಪಾತ್ರಗಳನ್ನು ನಿರ್ವಹಿಸುವ ಮೂಲಕ ಒಳ್ಳೆಯ ನಟಿ ಆಗುತ್ತೇನೆ.

◆ **ನಿಮ್ಮ ನಟನೆಯ ಆರಂಭದ ದಿನಗಳು ಹೇಗಿದ್ದವು?**

ತುಂಬ ಕಷ್ಟ ಆಯ್ತು. ಅವಕಾಶಗಳು ಸಿಗುತ್ತಿರಲಿಲ್ಲ. ಪಾತ್ರ ಕೊಟ್ಟರೆ ಸಂಭಾವನೆ ಇಲ್ಲ ಎನ್ನುತ್ತಾರೆ. ಇಲ್ಲವೇ ಸಂಭಾವನೆ ಕಡಿಮೆ ಹೇಳ್ತಾರೆ. ನನಗೆ ನಟನೆ ಪ್ಯಾಶನ್ ಆಗಿದ್ದರಿಂದ ಇಲ್ಲೇ ಇರಬೇಕು ಎನ್ನುವ ಛಲ. ನಿರಂತರ ಪ್ರಯತ್ನ ಮಾಡಿದರೂ ಅವಕಾಶಗಳು ಸಿಗುವುದು ಕಷ್ಟ ಆಗಿತ್ತು. ಬೆಂಬಲ, ಪ್ರೋತ್ಸಾಹ ಇಲ್ಲದ ನಮ್ಮಂತಹವರಿಗೆ ಸ್ವಲ್ಪ ಕಷ್ಟ. ಪ್ರತಿಭೆ ಇದ್ದರೂ ಶಿಫಾರಸ್ಸುಗಳಿಲ್ಲದೆ ಆರಂಭದಲ್ಲಿ ಅವಕಾಶ ಸಿಗುವುದು ವಿರಳ. ಕಷ್ಟದಿಂದಲೇ ಪ್ರವೇಶ ಮಾಡಿದ್ದೇನೆ. ಕಷ್ಟ ಸುಖ ಏನೇ ಇರಲಿ ಒಳ್ಳೆಯ ರೀತಿಯಲ್ಲಿ ನನ್ನ ವ್ಯಕ್ತಿತ್ವವನ್ನು ಕಾಪಾಡಿಕೊಂಡು ಬೆಳೆಯುವುದು ನನ್ನ ಸಂಕಲ್ಪ. ಚಿಕ್ಕಪಾತ್ರವಾದರೂ ಅರ್ಥಪೂರ್ಣವಾಗಿ ಮಾಡಬೇಕು.

◆ **ನಿಮ್ಮನ್ನು ಪರಿಚಯಿಸುವುದಾದರೆ...**

ನಯನತಾರಾದಲ್ಲಿ ಇರುವ ಪಾತ್ರಕ್ಕೂ ನನಗೂ ಒಂದಿಷ್ಟು ಹೋಲಿಕೆ ಇದೆ. ಹಾಗಾಗಿ ಅಭಿನಯ ಕೂಡ ಸುಲಭ ಅನಿಸುತ್ತದೆ. ಅದಕ್ಕಾಗಿ ವಿಶೇಷವಾಗಿ ತಯಾರಿ ಆಗಬೇಕಿಲ್ಲ. ನಾನೂ ಮುಗ್ಧವಾಗಿದ್ದೇನೆ. ಹೆಚ್ಚು ಸ್ನೇಹಿತರು ಇಲ್ಲ. ತುಮಕೂರು ನಮ್ಮ ಊರು. ನಾವು ಬೆಂಗಳೂರಿನಲ್ಲೇ ನೆಲೆಸಿದ್ದೇವೆ. ತಂದೆ ಭಗವಂತ್ ರಾಜ್ ಉದ್ಯಮಿ. ಅಮ್ಮ ಮಂಜುಳಾ ಗೃಹಿಣಿ, ತಂಗಿಯೊಬ್ಬಳಿದ್ದಾಳೆ ಅವಳು ಡಿಗ್ರಿ ಓದುತ್ತಿದ್ದಾಳೆ. ಪೋಷಕರು ತುಂಬ ಬೆಂಬಲಿಸುತ್ತಾರೆ. ನಾನು ಏನೇ ಮಾಡಿದರು ನಿರ್ಬಂಧವನ್ನು ಅವರು ಹೇರುವುದಿಲ್ಲ.

◆ **ಈ ಪಾತ್ರ ಮೆಚ್ಚಿ ಪ್ರೇಮ ಕೋರಿಕೆ ಬರಲಿಲ್ಲವೇ?**

ಹಾಗೆ ಬಂದಿಲ್ಲ. ಆದರೆ, ಯೂಟ್ಯೂಬ್ ಮತ್ತು ಇನ್‌ಸ್ಟಾಗ್ರಾಮ್‌ನಲ್ಲಿ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಪ್ರಶಂಸೆಯನ್ನೂ ಮಾಡುತ್ತಾರೆ. ಕೆಲವರು ಗಾಂಚಲಿ ಜಾಸ್ತಿ ಎಂದೂ ಕಾಮೆಂಟ್ ಮಾಡುತ್ತಾರೆ. ಕಾಮೆಂಟ್ ಏನೇ ಇದ್ದರೂ ಖುಷಿ ಆಗುತ್ತದೆ. ಅದರಿಂದ ನಮ್ಮ ಸೀರಿಯಲ್ ನೋಡುತ್ತಾರೆ ಎಂದು ಗೊತ್ತಾಗುತ್ತದೆ. ಕಥೆಗೆ ಪ್ರತಿಕ್ರಿಯೆ ನೀಡಿ ಮುಂದೆ ಏನಾಗುತ್ತದೆ ಎಂದು ಕೇಳುತ್ತಾರೆ. ಅವರ ಅಭಿಮಾನಕ್ಕೆ ಉತ್ತರಿಸಿದರೆ ನಮಗೆ ಆಗುವ ಖುಷಿ ಅವರಿಗೂ ಆಗುತ್ತದೆ. ಖಂಡಿತ ಪ್ರತಿಕ್ರಿಯೆ ನೀಡುತ್ತೇನೆ. ಅದಕ್ಕೆ ಕೆಲವರು ಸಂತೋಷವನ್ನು ವ್ಯಕ್ತಪಡಿಸುತ್ತಾರೆ. ನೆಗೆಟಿವ್ ಕಾಮೆಂಟ್‌ಗೂ ಥ್ಯಾಂಕ್ಸ್ ಹೇಳುತ್ತೇನೆ. ಅವರ ಸಮಯಕ್ಕೆ ಗೌರವಿಸುತ್ತೇನೆ.



■ **ರಾಘವೇಂದ್ರ ಕೆ.**